ಅ) ಕೊಪ್ಪಳ ಜಿಲ್ಲೆಯ ಕುಷ್ಟಗಿ ಪಟ್ಟಣದಲ್ಲಿನ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿಗೆ ಮಂಜೂರಾದ ಉಪನ್ಯಾಸಕರ ಸಂಖ್ಯೆ ಎಷ್ಟು;

ಸರ್ಕಾರಿ ಪಾಲಿಟೆಕ್ನಿಕ್, ಕುಷ್ಟಗಿ ಸಂಸ್ಥೆಗೆ ಮಂಜೂರಾಗಿರುವ ಉಪನ್ಯಾಸಕರ ಹುದ್ದೆಗಳ ಸಂಖ್ಯೆ 29.

ಆ) ಈ ಕಾಲೇಜಿನಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರ ಸಂಖ್ಯೆ ಎಷ್ಟು; ನಿಯೋಜನೆಗೊಂಡ ಉಪನ್ಯಾಸಕರ ಸಂಖ್ಯೆ ಎಷ್ಟು;

ಸದರಿ ಪಾಲಿಟೆಕ್ನಿಕ್‌ನಲ್ಲಿ ಪ್ರಸ್ತುತ 13 ಉಪನ್ಯಾಸಕರುಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. 2008–09ನೇ ಸಾಲಿನಿಂದ ಪ್ರಾರಂಭವಾಗಿರುವ ಹೊಸ ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ 3 ಉಪನ್ಯಾಸಕರುಗಳನ್ನು ನಿಯೋಜನೆ ಮಾಡಲಾಗಿದೆ.

ಇ) ಈ ನಿಯೋಜನೆಯನ್ನು ರದ್ದುಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ಹಾಗೂ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ಯಾವಾಗ ತುಂಬಲಾಗುವುದು?

ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಹಾಲಿ ಖಾಲಿಯಿದ್ದ ಹಾಗೂ 2008–09ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭಿಸಲಾಗಿರುವ ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ಮೊದಲನೆ ಹಂತದಲ್ಲಿ ಮಂಜೂರಾದ ಒಟ್ಟು 476 ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಕೋರಿಕೆ ಸಲ್ಲಿಸಲಾಗಿದ್ದು ಅದರಂತೆ ಆಯೋಗವು ದಿನಾಂಕ: 2–6–2008 ರ ಅಧಿಸೂಚನೆಯನ್ವಯ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ. ಈ ನೇಮಕಾತಿ ಪ್ರಕ್ರಿಯೆಯು ಪೂರ್ಣಗೊಂಡ ನಂತರ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳ ನಿಯೋಜನೆಯನ್ನು ರದ್ದುಪಡಿಸಲು ಕ್ರಮವಹಿಸಲಾಗುವುದು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(134) 280**
ಸದಸ್ಯರ ಹೆಸರು	:	**ಶ್ರೀ ಬಾಲಕೃಷ್ಣ ಹೆಚ್.ಸಿ**
ಉತ್ತರಿಸಬೇಕಾದ ಸಚಿವರು	:	**(ಶ್ರೀ ಅರವಿಂದ ಲಿಂಬಾವಳಿ) ಉನ್ನತ ಶಿಕ್ಷಣ ಸಚಿವರು**

ಅ) ಮಾಗಡಿ ಮತ್ತು ರಾಮನಗರ ತಾಲ್ಲೂಕಿನಲ್ಲಿರುವ ಪದವಿ ಕಾಲೇಜಿನ ಉಪನ್ಯಾಸಕರ ಹಾಗೂ ಕೊಠಡಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು

ಆ) ಹಾಗಿದ್ದಲ್ಲಿ, ಅವುಗಳ ವಿಷಯವಾರು ವಿವರ ನೀಡುವುದು;

ವಿಷಯ–ವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಎಷ್ಟು ದಿನಗಳಲ್ಲಿ ಈ ಕೊರತೆಯನ್ನು ಪರಿಹರಿಸಲಾಗುವುದು?

ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ವಿವಿಧ ವಿಷಯಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳ ಕಾರ್ಯಭಾರ ನಿರ್ವಹಿಸುವ ಸಲುವಾಗಿ ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳಲು ಪ್ರಾಂಶುಪಾಲರಿಗೆ ಅಧಿಕಾರ ನೀಡಲಾಗಿದೆ. ಅದಲ್ಲದೆ ಉಪನ್ಯಾಸಕರ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದ ಮುಖಾಂತರ ಆಯ್ಕೆ ಮಾಡಲು ಪ್ರಸ್ತಾವನೆ ಸಲ್ಲಿಸಿದ್ದು ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಅದೇ ರೀತಿ ಮಾಗಡಿ ಹಾಗೂ ರಾಮನಗರ ತಾಲ್ಲೂಕುಗಳಲ್ಲಿ ಕ್ರಮವಾಗಿ 02 ಹಾಗೂ 04 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿದ್ದು, ಅವುಗಳ ಕಟ್ಟಡ ಕಾಮಗಾರಿಗಳ ವಿವರ ಈ ಕೆಳಗಿನಂತಿದೆ:–

- ಮಾಗಡಿಯಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ಹಾಗೂ ಕಾಂಪೌಂಡ್ ಗೋಡೆಗಳ ನಿರ್ಮಾಣದ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.
- ಕುದೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕೊಠಡಿ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕಾಗಿ ರೂ.25.00 ಲಕ್ಷಗಳನ್ನು ಒದಗಿಸಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ.
- ರಾಮನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಹುಡ್ಕೋ ಯೋಜನೆಯಡಿ ಕಟ್ಟಡ ನಿರ್ಮಿಸಲಾಗಿದೆ.
- ರಾಮನಗರ ಸರ್ಕಾರಿ ಮಹಿಳಾ ಕಾಲೇಜಿಗೆ ರೂ.100.00 ಲಕ್ಷಗಳ ಮೊತ್ತದ ಅನುದಾನ ಒದಗಿಸಲಾಗಿದ್ದು, ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ.
- ರಾಮನಗರ ಸರ್ಕಾರಿ ಕಾನೂನು ಕಾಲೇಜಿಗೆ ದೊಡ್ಡಮಣ್ಣುಗುಡ್ಡೆ ಗ್ರಾಮದಲ್ಲಿ 5–00 ಎಕರೆ ವಿಸ್ತೀರ್ಣದ ಭೂಮಿಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಮಂಜೂರು ಮಾಡಿದ್ದು, ಸದರಿ ಕಾಲೇಜಿನ ಕಟ್ಟಡ ಕಾಮಗಾರಿಗಳಿಗೆ 2008–09ನೇ ಸಾಲಿನಲ್ಲಿ ರೂ.100.00 ಲಕ್ಷಗಳ ಮೊತ್ತದ ಅನುದಾನ ಒದಗಿಸಲಾಗಿದೆ.
- ಬಿಡದಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ಕಾಮಗಾರಿಗೆ ಪ್ರಸಕ್ತ ಸಾಲಿನಲ್ಲಿ ರೂ.100.00 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

ಅನುಬಂಧ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿಡದಿ

ವಿಷಯ	ಮಂಜೂರಾದ ಹುದ್ದೆಗಳ ಸಂಖ್ಯೆ	ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ	2007–08ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸಿದ ಅತಿಥಿ ಉಪನ್ಯಾಸಕರ ಸಂಖ್ಯೆ
ಕನ್ನಡ	1	0	1	–
ಇಂಗ್ಲೀಷ್	1	0	1	–
ಇತಿಹಾಸ	1	0	1	–
ಅರ್ಥಶಾಸ್ತ್ರ	1	1	0	–
ರಾಜ್ಯಶಾಸ್ತ್ರ	1	1	0	–
ಸಮಾಜಶಾಸ್ತ್ರ	1	0	1	–
ವಾಣಿಜ್ಯಶಾಸ್ತ್ರ	3	1	2	–
ಭೌತಶಾಸ್ತ್ರ	1	0	1	–
ಗಣಿತಶಾಸ್ತ್ರ	1	0	1	–
ಗಣಕ ವಿಜ್ಞಾನ	1	0	1	–
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಮನಗರ				
ಕನ್ನಡ	2	2	0	6
ಇಂಗ್ಲೀಷ್	2	2	0	3
ಹಿಂದಿ	0	0	0	1
ಉರ್ದು	0	0	0	1
ಇತಿಹಾಸ	3	3	0	4
ಅರ್ಥಶಾಸ್ತ್ರ	3	3	0	6
ರಾಜ್ಯಶಾಸ್ತ್ರ	1	1	0	1
ಸಮಾಜಶಾಸ್ತ್ರ	1	1	0	–
ಭೂಗೋಳ ಶಾಸ್ತ್ರ	4	3	1	–
ವಾಣಿಜ್ಯಶಾಸ್ತ್ರ	4	4	0	5
ರಸಾಯನ ಶಾಸ್ತ್ರ	2	2	0	3
ಸಸ್ಯಶಾಸ್ತ್ರ	2	2	0	1
ಬಯೋಟೆಕ್ನಾಲ	1	0	1	3

ಜಿ				
ಪರಿಸರ ವಿಜ್ಞಾನ	0	0	0	2
ಸರ್ಕಾರಿ ಮಹಿಳಾ ಕಾಲೇಜು, ರಾಮನಗರ				
ಕನ್ನಡ	1	1	0	1
ಇಂಗ್ಲೀಷ್	1	1	0	1
ಉರ್ದು	0	0	0	1
ಇತಿಹಾಸ	1	1	0	–
ಅರ್ಥಶಾಸ್ತ್ರ	1	1	0	–
ರಾಜ್ಯಶಾಸ್ತ್ರ	1	0	1	1
ಸಮಾಜಶಾಸ್ತ್ರ	1	0	1	–
ವಾಣಿಜ್ಯಶಾಸ್ತ್ರ	3	1	2	–
ಭೌತಶಾಸ್ತ್ರ	1	0	1	–
ಗಣಿತಶಾಸ್ತ್ರ	1	0	1	–
ಗಣಕ ವಿಜ್ಞಾನ	1	0	1	–
ಸರ್ಕಾರಿ ಕಾನೂನು ಕಾಲೇಜು, ರಾಮನಗರ				
ಇಂಗ್ಲೀಷ್	1	0	1	–
ಕಾನೂನು	8	0	8	1
ಇತಿಹಾಸ	1	0	1	1
ರಾಜ್ಯಶಾಸ್ತ್ರ	1	0	1	1
ಅರ್ಥಶಾಸ್ತ್ರ	1	0	1	1
ಸಮಾಜಶಾಸ್ತ್ರ	0	0	0	1
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಗಡಿ				
ಕನ್ನಡ	1	1	0	1
ಇಂಗ್ಲೀಷ್	1	1	0	1
ಇತಿಹಾಸ	1	1	0	–
ಅರ್ಥಶಾಸ್ತ್ರ	1	1	0	1
ರಾಜ್ಯಶಾಸ್ತ್ರ	1	1	0	–
ಸಮಾಜಶಾಸ್ತ್ರ	1	1	0	–
ವಾಣಿಜ್ಯಶಾಸ್ತ್ರ	6	3	3	3
ಭೌತಶಾಸ್ತ್ರ	1	1	0	1
ಗಣಿತಶಾಸ್ತ್ರ	1	0	1	1
ಗಣಕ ವಿಜ್ಞಾನ	2	0	2	1

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುದೂರು				
ಕನ್ನಡ	0	0	0	2
ಇಂಗ್ಲೀಷ್	1	1	0	2
ಉರ್ದು	0	0	0	1
ಇತಿಹಾಸ	1	1	0	–
ಅರ್ಥಶಾಸ್ತ್ರ	1	1	0	1
ರಾಜ್ಯಶಾಸ್ತ್ರ	1	1	0	1
ವಾಣಿಜ್ಯಶಾಸ್ತ್ರ	1	1	0	4
ಪರಿಸರ ವಿಜ್ಞಾನ	0	0	0	1
ಗಣಕ ವಿಜ್ಞಾನ	0	0	0	4

ಕಾಲೇಜು ಶಿಕ್ಷಣ ನಿರ್ದೇಶಕರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (135)280
ಸದಸ್ಯರ ಹೆಸರು : ಶ್ರೀ.ಬಾಲಕೃಷ್ಣ ಹೆಚ್.ಸಿ
ಉತ್ತರಿಸುವ ಸಚಿವರು : (ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಅ) ಮಾಗಡಿ ಮತ್ತು ರಾಮನಗರ ತಾಲ್ಲೂಕಿನಲ್ಲಿ ಜೂನಿಯರ್ ಕಾಲೇಜುಗಳಲ್ಲಿ ಇರುವ ಉಪನ್ಯಾಸಕರ ಕೊರತೆ ಎಷ್ಟು; ವಿಷಯವಾರು ವಿವರ ನೀಡುವುದು

1. ಮಾಗಡಿ ತಾಲ್ಲೂಕಿನಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ 28 ಹಾಗೂ ರಾಮನಗರ ತಾಲ್ಲೂಕಿನಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ 21 ಉಪನ್ಯಾಸಕರ ಹುದ್ದೆಗಳು ಖಾಲಿ ಇದೆ. (ವಿಷಯವಾರು ವಿವರ ಅನುಬಂಧ–1ರಲ್ಲಿ ನೀಡಲಾಗಿದೆ)

ಆ) ಖಾಲಿ ಇರುವ ಉಪನ್ಯಾಸಕರನ್ನು ಎಷ್ಟು ದಿನಗಳಲ್ಲಿ ಭರ್ತಿ ಮಾಡಲಾಗುವುದು;

- 2450 ಉಪನ್ಯಾಸಕರ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಲು ಕರ್ನಾಟಕ ಲೋಕ ಸೇವಾ ಆಯೋಗವನ್ನು ಕೋರಲಾಗಿದ್ದು, ಆಯೋಗವು ದಿನಾಂಕ:02/04/2008 ರಂದು ಅಧಿಸೂಚನೆ ಹೊರಡಿಸಿ ಆಯ್ಕೆ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ.